**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**
**ಸಿಸಿ ನಂಬರ : 899-2022**

ಸಾಕ್ಷಿಯ ಹೆಸರು : ಕೃಷ್ಣನಾಯಕ್ ಸಿ.ಡಬ್ಲ್ಯು 2
ತಂದೆಯ ಹೆಸರು : ಖಂಡ್ಯಾನಾಯಕ್ ಪಿ.ಡಬ್ಲ್ಯು 3
ವಯಸ್ಸು : 39 ವರ್ಷ
ಉದ್ಯೋಗ : ಪಿ.ಎಸ್.ಐ, ತರೀಕೆರೆ
ವಾಸ ಸ್ಥಳ : ತರೀಕೆರೆ

**ದಿನಾಂಕಃ 06-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ನಾನು ಕಳೆದ ಎರಡು ವರ್ಷಗಳಿಂದ ತರೀಕೆರೆ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಎಂದು ಕೆಲಸ ಮಾಡುತ್ತಿದ್ದೇನೆ. ದಿಃ 01-11-2021 ರಂದು ನಾನು ಸಂಜೆ 6-00 ಗಂಟೆ ಸಮಯದಲ್ಲಿ ಠಾಣೆಯಲ್ಲಿ ಇದ್ದಾಗ ಚಾ,ಸಾ-1 ರವರಿಗೆ ನಮ್ಮ ಠಾಣಾ ವ್ಯಾಪ್ತಿಯ ನಾಗೇನಹಳ್ಳಿ ಗ್ರಾಮದಲ್ಲಿ ಒಬ್ಬ ವ್ಯಕ್ತಿಯು ಅಕ್ರಮವಾಗಿ ಮದ್ಯ ಸಂಗ್ರಹಿಸಿ ಮಾರಾಟ ಮಾಡುತ್ತಿದ್ದಾನೆ ಎಂಬ ಮಾಹಿತಿ ಬಂದ ವಿಷಯವನ್ನು ನನಗೆ ಮತ್ತು ಚಾ.ಸಾ-3 ರವರಿಗೆ ತಿಳಿಸಿದರು. ಆ ಪ್ರಕಾರ ನಾವುಗಳು ಇಲಾಖಾ ಜೀಪಿನಲ್ಲಿ ಕೂಡಲೇ ಠಾಣೆಯಿಂದ ಹೊರಟು ತಾಲ್ಲೂಕು ಕಛೇರಿಯ ಮುಂಬಾ,ಗದಲ್ಲಿ ನಿಂತಿದ್ದ ಚಾ.ಸಾ-4 ಮತ್ತು 5 ರವರನ್ನು ಚಾ.ಸಾ-1 ರವರು ಪಂಚರಾಗಿ ಸಹಕರಿಸಲು ಕೋರಿದಾಗ ಅವರು ಒಪ್ಪಿಕೊಂಡ ಮೇರೆಗೆ ಅವರನ್ನು ಕೂಡ ಕರೆದುಕೊಂಡು ನಾಗೇನಹಳ್ಳಿ ಗ್ರಾಮಕ್ಕೆ ಹೋದೆವು. ಅಲ್ಲಿ ಸರ್ಕಾರಿ ಶಾಲೆಯ ಹತ್ತಿರ ಮರೆಯಲ್ಲಿ ವಾಹನವನ್ನು ನಿಲ್ಲಿಸಿ, ಸ್ವಲ್ಪ ದೂರ ನಡೆದುಕೊಂಡು ಹೋಗಿ ನೋಡಲಾಗಿ, ಶಾಲೆಯ ಪಕ್ಕದಲ್ಲಿ ಇದ್ದ ಒಂದು ಅಂಗಡಿಯಲ್ಲಿ ಒಬ್ಬ ವ್ಯಕ್ತಿಯು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದು ಖಚಿತ ಪಡಿಸಿಕೊಂಡು ದಾಳಿ ಮಾಡಲಾಗಿ, ಆರೋಪಿಯು ಓಡಿ ಹೋದನು. ಬಾತ್ಮಿದಾರರ ಮೂಲಕ ಓಡಿ ಹೋದ ವ್ಯಕ್ತಿಯ ಹೆಸರು ಕೃಷ್ಣ ತಂದೆ ಶಿವಲಿಂಗಣ್ಣ ಎಂದು ಗೊತ್ತಾಯಿತು. ಅಂಗಡಿಯನ್ನು ಪರಿಶೀಲಿಸಲಾಗಿ, ಒಂದು ಬಾಕ್ಸ್ ನಲ್ಲಿ 90 ಎಂ.ಎಲ್ ನ 96 ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿ ಟೆಟ್ರಾ ಪ್ಯಾಕೇಟುಗಳು ದೊರೆತವು. ಆರೋಪಿಗೆ ಮದ್ಯವನ್ನು ಸಂಗ್ರಹಿಸಿಕೊಳ್ಳಲು ಮತ್ತು ಮಾರಾಟ ಮಾಡಲುಪರವಾನಗಿ ಇಲ್ಲದಿರುವುದು ಗೊತ್ತಾಯಿತು. ಕಾರಣ ಚಾ.ಸಾ-1 ರವರು ಸದರಿ ಮದ್ಯವನ್ನು ಚಾ.ಸಾ-4 ಮತ್ತು 5 ಇವರ ಸಮಕ್ಷಮ 6-30 ರಿಂದ 7-30 ರ ಮದ್ಯದಲ್ಲಿ ಪಂಚನಾಮೆಯನ್ನು ಜರುರಿಗಿಸಿ ತಮ್ಮ ವಶಕ್ಕೆ ಪಡೆದುಕೊಂಡರು. ನಂತರ ಎಲ್ಲರೂ ಠಾಣೆಗೆ ಹಿಂತಿರುಗಿ ಚಾ.ಸಾ-1 ರವರು ಸರ್ಕಾರದ ಪರವಾಗಿ ದೂರನ್ನು ಕೊಟ್ಟಿರುತ್ತಾರೆ. ಸ್ಥಳ ಮತ್ತು ಜಪ್ತಿ ಪಂಚಾನಾಮೆಯನ್ನು ನಿ.ಪಿ-1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ-1(ಸಿ) ಎಂದು ಗುರುತಿಸಲಾಯಿತು. ದಾಳಿಯ ಸಮಯದಲ್ಲಿ ವಶಪಡಿಸಿಕೊಂಡ ಮದ್ಯವನ್ನು ನೋಡಿ

ಗುರುತಿಸುತ್ತೇನೆ. ಎಲ್ಲಾ ಮದ್ಯದ ಪ್ಯಾಕೇಟುಗಳನ್ನು ಒಟ್ಟಾಗಿ ಮು.ಮಾ.-1 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಸಾರ್ವಜನಿಕು ಯಾರು ಮತ್ತು ಅವರ ವಿವರಗಳನ್ನು ಹೇಳಲು ಬರುವುದಿಲ್ಲ. ಮು.ಮಾ-1 ರಂತಹ ಮದ್ಯದ ಪ್ಯಾಕೇಟುಗಳು ಸಾಮಾನ್ಯವಾಗಿ ಮದ್ಯದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ದಾಳಿಯ ಸಮಯದಲಿಲ ಕತ್ತಲಾಗಿತ್ತು ಎಂದರೆ ಸರಿಯಲ್ಲ. ವಿದ್ಯುತ್ ದೀಪಗಳು ಇದ್ದವು. ಆರೋಪಿಯನ್ನು ಹಿಡಿಯಲು ಪ್ರಯತ್ನ ಮಾಡಿದ್ದೇವೆ ಆತನು ಸಿಗಲಿಲ್ಲ. ಆರೋಪಿ ಓಡಿ ಹೋದ ಬಗ್ಗೆ ಮಾತ್ರ ನನ್ನ ಹೇಳಿಕೆಯಲ್ಲಿ ತಿಳಿಸಿದ್ದೇನೆ. ಚಾ.ಸಾ-1 ರವರೊಂದಿಗೆ ನಾನು ಯಾವುದೇ ದಾಳಿಗೆ ಹೋಗಿಲ್ಲ ಮತ್ತು ನನಗೆ ಈ ಪರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ, ಚಾ.ಸಾ-1 ನನ್ನ ಮೇಲಾಧಿಕಾರಿ ಎಂದರೆ ಸರಿ, ಅವರು ಹೇಳಿದ ಹಾಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

**<u>ಮರುವಿಚಾರಣೆ :</u>** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

*ಓ ಹೇ ಕೇ ಸ ಇ ಎ ಒ*

**Sd/-**

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***